ಎಂದೆ. 'ಡಾಕ್ಟರಿಗೆ ತೋರಿಸಿ ಆಗೇದ. ಅವರ ಕಡೆ ಆ ಶಕ್ತಿನ ಇಲ್ಲಂತ ರಿಪೋರ್ಟ್ ಬಂದದ. ಅದನ್ನ ಯಾರಿಗೂ ಗೊತ್ತಾಗಧಂಗ ಮುಚ್ಚಿ ಇಟ್ಟೇನಿ' ಎಂದರು. ನನ್ನ ಜಂಘಾಬಲ ಉಡುಗಿದಂತಾಯಿತು. ಸರ್ರನ ಕೂತು ಅವರ ಪಾದಾ ಮುಟ್ಟಿ, 'ಇಲ್ಲರಿ ವೈನಿ. ನೀವು ನನಗ ತಾಯಿನ' ಅಂದೆ. ನನ್ನ ದುರುಗುಟ್ಟಿ ನೋಡಕೋತ ಹೋದರು.

ಆವಾಗಿಂದ ಮನ್ಯಾಗ ಇರಲಿಕ್ಕೆ ಹೆದರಲಿಕ್ಹತ್ತೆ. ಎಲ್ಲರೆ ಹೋಗಿಬಿಡಬೇಕಂದ್ರ ಪರೀಕ್ಷಾ ಬ್ಯಾರೇ ನಡದಿದ್ದವಲಾ. ಅಂಜಕೋತ ಖೋಲಿ ಬಾಗಲಾ ಹಾಕ್ಕೊಂಡು ಮಲಕೋತಿದ್ದೆ. ಎರಡು ದಿನಾ ಆದ ಮ್ಯಾಲೆ ಮೋಹನಣ್ಣ ಊರಿಂದ ಬಂದ. ಅವ್ವ ಇನ್ನೂ ನಾಲ್ಕು ದಿವ್ಸ ಕಳದ ಮ್ಯಾಲೆ ಬರಾಕಿದ್ಲು. ಮರದಿವ್ಸ ಮಧ್ಯಾಹ್ನ ನಾ ಪರೀಕ್ಷಾ ಮುಗಿಸಿ ಉಶ್ ಅಂತ ಬಂದೆ. ಅವ್ವನ ಕಡೆ ಊರಿಗೆ ಹೋಗಾಂವಿದ್ದೆ. ಅಷ್ಟರಾಗ ವೈನಿ ಎದುರಿಗೆ ಬಂದು ನಿಂತರು. ದೆವ್ವ ಕಂಡಂಗ ಆತು ನನಗ. ಅಣ್ಣಾ ಹೊಲಕ್ಕ ಹೋಗಿದ್ದಾ. ಆಳು... ಕಾಳು... ಯಾರೂ ಇರಲಿಲ್ಲಾ. ನಾಲಿಗಿ ಪಸಿ ಆರಿ ಗಂಟಲಾ ಒಣಗಿತು. 'ವೈ... ನಿ...'ಅಂದೆ. 'ನನಗ ಮಕ್ಕಳು ಬೇಕು. ಹೊರಗ ಗೊತ್ತಾಗಬಾರದು. ನಾ ಹೇಳಿಧಂಗ ಕೇಳಿದ್ರ ಎಲ್ಲಾ ಸಮಾ ಆಗ್ತದ. ಇಲ್ಲಾಂದ್ರ ನಾ ನಿಮಗ ಬದಕ್ಲಿಕ್ಕೂ ಬಿಡೂದುಲ್ಲಾ. ಸಾಯಲಿಕ್ಕೂ ಬಿಡೂದುಲ್ಲಾ' ಅಂತ ಕಣ್ಣು ಕೆಂಪ ಮಾಡಿದ್ರು. ನನಗೇನು ಮಾಡಬೇಕಂತ ತಿಳೀಲಿಲ್ಲ. ಅವರ್ನ ದುಗಿಸಿ ಹೊರಗೋಡಿದೆ ನೋಡು... ಸೀದಾ ಬಂದು ಹೊಳಿಗೆ ಹಾರಿದೆ. ಈಸಿದೆ... ಈಸಗೋತನ ಅತ್ಲಾಗಿನ ದಂಡಿ ಸೇರಿದೆ. ಏನ ಮಾಡಬೇಕು ತಿಳೀದನ ಎದುರಿಗೆ ಇದ್ದ ಅಡಿಗಿಯಾಂವಾ ಪ್ರಹ್ಲಾದಾಚಾರಿ ಮನಿಗೆ ಹೋದೆ. ಬೈದು ಒಣಾ ಪಂಜಾ ಉಟಗೊಳಿಕ್ಕೆ ಕೊಟ್ಟ. 'ಓದು ಬ್ಯಾಡಾಗೇದ. ಮನ್ಯಾಗ ಓದು ಅಂತ ಬೈತಾರ. ಎಲ್ಲರೆ ಧೂರ ಹೊಂಟೇನಿ' ಅಂದೆ. 'ನಾ ಮುಂಬೈಕ್ಕ ಅಡಗಿ ಮಾಡಲಿಕ್ಕೆ ಹೊಂಟೇನಿ. ನಡಿ ನನ್ನ ಜೋಡಿ. ಬೇಕಾದಷ್ಟು ಭೂಮಿ, ಕಾಣಿ ಅದ. ನೋಡಕೊಂಡು ಹೋದ್ರ ಸಾಕು. ಓದಲೇಬೇಕಂತ ಏನು? ಮನಿಗೆ ಸುದ್ದಿ ಮುಟ್ಟಸು. ತಿರಗಿ ಬಂದ ಮ್ಯಾಲೆ ನಿಮ್ಮವ್ವ, ಅಣ್ಣನ ಜೋಡಿ ಮಾತಾಡ್ತೇನಿ' ಅಂದ. ಸಣ್ಣಾವ್ರಿದ್ದಾಗ ಅವನ ತೊಡಿ ಮ್ಯಾಲೆ ಆಡಿ ಬೆಳೆದಾವ್ರು ನಾವು. 'ಹ್ಞೂಂ...' ಅಂದೆ ಅಷ್ಟ. ಯಾರಿಗೂ ಹೇಳಲೇ ಇಲ್ಲ. ಅವನ ಜೋಡಿ... ಅವನ ಅಡಿಗಿ ಸಾಮಾನಗೋಳ ಜೋಡಿ ಗಾಡಿವಳಗ ಮುಂಬೈ ಮುಟ್ಟಿದೆ.

ತೆಪ್ಪ ಆರಾಮಾಗಿ ಒಂದೊಂದೇ ಘಾಟ್‌ನ ದರ್ಶನ ಮಾಡಿಸುತ್ತಾ ತಿರುಗುತ್ತಿತ್ತು. ಸೂರ್ಯ ತನ್ನ ಕೆಲಸ ಮುಗಿಸಿ ಕೆಂಬಣ್ಣದ ಓಕುಳಿಯೊಂದಿಗೆ ಮನೆಗೆ ಮರಳುತ್ತಿದ್ದ. ನಾಳೆ ಕಾಶಿಯ ಸೂರ್ಯಾಸ್ತಮಾನ ನೋಡುವ ಅದೃಷ್ಟವಿರಲಿಲ್ಲವಲ್ಲ. ಅದನ್ನು ಕಣ್ತುಂಬಿಕೊಳ್ಳುತ್ತ ಥಟ್ಟನೇ, 'ಊರಾಗ... ಮನ್ಯಾಗ ಎಲ್ಲಾ ನೀ ಸುಳಿವಳಗ ಮುಳುಗಿ ಸತ್ತು ಹೋದಿ ಅಂತ ತಿಳಕೊಂಡ್ರು' ಎಂದೆ. 'ಹೌದು... ನಾ ಮುಂಬೈದಾಗ ಮಠದಾಗ ಪ್ರಹ್ಲಾದಾಚಾರಿ ಜೋಡಿ ಹೋಳಿಗಿ, ಮೋತಿಚೂರು, ಶ್ರೀಖಂಡ ಮಾಡಕೋತ ಆರಾಮಾಗಿದ್ದೆ. ಮೂರು ತಿಂಗಳಾದು. ಅವ್ವನ ನೆನಪಾಗಿ ಕಣ್ಣು ತುಂಬತಿದ್ವು. ನಿನ್ನ ನೆನಪಾಗ್ತಿತ್ತು. ಆದರ ಯಾರಿಗೂ ಏನೂ ಹೇಳ್ಲಿಕ್ಕೆ ಕಾಲ ಕೂಡಿ ಬಂದಿರಲಿಲ್ಲ. ತಿರಗಿ ಊರಿಗೆ ಬರೋ ಮುಂದ 'ಅಷ್ಟವಿನಾಯಕ ನೋಡಿ ಬಾ' ಅಂತ ಕಳಿಸಿದ. ನಾ ಹೋಗಿ ಬರೋವಷ್ಟರಾಗ ಒಲಿ ಮುಂದ ಕೂತು ಅಂವಾ ಪ್ರಾಣಾ ಬಿಟ್ಟಿದ್ದ. ಕೈಯಾಗಿದ್ದ ಸಾರಿನ ಪುಡಿ ಹಂಗ ಇತ್ತು. ಹೃದಯಾಘಾತ ಆಗಿತ್ತು ಅಂವಗ. ಅವನ ಕರ್ಮ ಎಲ್ಲಾ ನನ್ನ ಕಡೆನ ಮಾಡಿಸಿದ್ರು. ಮುಂದ... ಅಲ್ಲಿ ಅಡಿಗಿಯಾವ್ರು ಕಾಶಿಗೆ ಹೊಂಟಿದ್ರು. ಅವರ ಜೋಡಿ ಬಂದೆ. ಇಲ್ಲೇ ತಳಾ ಊರಿ ಬಿಟ್ಟೆ. ಇಲ್ಲೆ ನಿತ್ಯ ಶ್ರಾದ್ಧ, ಕರ್ಮ ನಡೀತಾನ ಇರ್ತಾವ. ಕೆಲಸ ಯಾವತ್ತೂ ಕಡಿಮಿ ಆಗೂದನ ಇಲ್ಲಾ. ಅಡಿಗಿ ಮಾಡ್ತೇನಿ. ಸ್ವಾದಿಗೆ ಹೋಗಿರ್ತೇನಿ. ಅಲ್ಲೂ ಅಡಿಗಿ ಮಾಡಕೋತ ತಿಂಗಳಗಟ್ಲೆ ಇರ್ತೇನಿ' ಎಂದ.

ನಾನು ಅವನ ಮಾತುಗಳಿಗೆ ಕಿವಿಯಾಗಿ ಅವನನ್ನೇ ಕಣ್ತುಂಬಿಕೊಳ್ಳುತ್ತಿದ್ದೆ. ಗೆಳೆಯ ಎಷ್ಟೊಂದು ನೋವು, ತಳಮಳ ಅನುಭವಿಸಿರಬಹುದು? ಪಾಡು ಪಟ್ಟಿರಬಹುದು... ಎನಿಸಿ ದುಃಖ ಉಕ್ಕುತ್ತಿತ್ತು. 'ಅಂಥಂಗ ನಾ ಇಲ್ಲೆ ಅಚ್ಚುತ ಅಲ್ಲಪಾ. ಭೀಮ... ಭೀಮ ಭೈಯ್ಯಾ ಅಂತ ಕರೀತಾರ. ಇನ್ನೂ ತನಕಾ ಯಾರೂ ಹಳಬರು ಗುರುತು ಹಿಡದಿಲ್ಲಾ. ನೀನ ಮದ್ಲೇದಾಂವಾ. ಅದಕ್ಕ ಒಮ್ಮೆಲೆ ಒಪ್ಪಿಗೊಳ್ಳದನ ಹಿಂದ ಮುಂದ ನೋಡಿದೆ. ಅಂತೂ ಕಾಶಿ ವಿಶ್ವನಾಥ ನನ್ನ ಕೈ ಬಿಡಲಿಲ್ಲಾ. ನನಗ ಬದುಕು ಕೊಟ್ಟಾ. ಭೋಲೇ ಭಟೂರೆ,